ಎನೋ ತೊಂದರೆ ಆಗುತ್ತದೆಂದು ಅವರಿಗೆ ಹೆದರಿಕೆ ಇದು ಆಗದಂತೆ ಮಾಡಬೇಕು. ಇದನ್ನು ಹೇಗೆ ಮಾಡುತ್ತೀರಿ?

ಶ್ರೀಮತಿ ಮೋಟಮ್ಮ :- ಮಾನ್ಯ ಅಧ್ಯಕ್ಷರೇ, ಅದಕ್ಕಾಗಿ ಪ್ರತಿ ಅಂಗನವಾಡಿ ಕ್ಷೇತ್ರದಲ್ಲಿ ನಾವು ಅಂಗನವಾಡಿ ಸಲಹಾ ಕೇಂದ್ರಗಳನ್ನು ಮಾಡಿದ್ದೇವೆ. ಅದೇ ಒಂದು ರೀತಿ ವಿಜಿಲೆಂಟ್ ಕಮಿಟಿ ಇದ್ದ ಹಾಗೆ. ಅವರು ಸರಿಯಾಗಿ ಕೆಲಸ ಮಾಡಿದರೆ ಇದು ಎಷ್ಟೋ ಕಂಟ್ರೋಲ್ ಆಗುತ್ತದೆ. ನಮ್ಮ ಇಲಾಖೆಯಿಂದ ಸೂಪರ್‌ವೈಜರ್ ನೋಡುತ್ತಾರೆ; ಸಿ.ಡಿ.ಪಿ.ಓ. ನೋಡುತ್ತಾರೆ; ಅಸಿಸ್ಟೆಂಟ್ ಡೈರೆಕ್ಟರ್ ನೋಡುತ್ತಾರೆ. ನಿಮ್ಮ ಗಮನಕ್ಕೆ ಬಂದಾಗ ತಾವು ಅವರ ಗಮನಕ್ಕೆ ತಂದರೆ ಅವರು ಕ್ರಮ ತೆಗೆದು ಕೊಳ್ಳುವುದಕ್ಕೆ ಹಿಂದೆ ಮುಂದೆನೋಡುವುದಿಲ್ಲ. ಈಗ ತಾವು ಏನು ಹೇಳಿದಿರಿ ಅದನ್ನು ನಾನು ವಿಚಾರ ಮಾಡುತ್ತೇನೆ.

## ಚಿಂತಾಮಣಿಯಲ್ಲಿ ಶೀತಲ ಗೃಹದ ನಿರ್ಮಾಣ

140 (1919) - ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಚಿಂತಾಮಣಿ ಕೃಷಿ ಮಾರುಕಟ್ಟೆಗೆ ಹೆಚ್ಚಿನ ರೀತಿಯಲ್ಲಿ ಹಣ್ಣು ತರಕಾರಿ ಮಾರಾಟಕ್ಕೆ ಬರುತ್ತಿದ್ದು ರೈತರಿಗೆ ಈಗಿರುವ ಸವಲತ್ತುಗಳು ಸಾಲದೆ ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಮಾರುಕಟ್ಟೆಗೆ ಬರುವ ಹಣ್ಣು ತರಕಾರಿ ಕೆಡದೆ ಇರುವುದಕ್ಕೆ 1993-94 ರಲ್ಲಿ ಕೇಂದ್ರ ಸರ್ಕಾರದಿಂದ ಶ್ರೀತಲೀಕರಣ ಕೇಂದ್ರ ಮಂಜೂರಾಗಿರುವುದು ನಿಜವೇ;

ಇ) ಈ ಮಾರುಕಟ್ಟೆಯ ಅಭಿವೃದ್ಧಿಗೆ ಸರ್ಕಾರ ಯಾವಯಾವ ಕಾರ್ಯಕ್ರಮಗಳನ್ನು ಕೈಗೊಂಡಿರುವುದು (ವಿವರಗಳನ್ನು ತಿಳಿಸುವುದು)?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು)

ಅ) ಹೌದು

ಆ) ಇಲ್ಲ

ಇ) 25:31 ಎಕರೆ ಜಮೀನು ಸ್ವಾಧೀನಪಡಿಸಿಕೊಂಡು ಆಹಾರ ಧಾನ್ಯ, ಜಾನುವಾರು ಮತ್ತು ಹಣ್ಣು ತರಕಾರಿಗಳು ಸಗಟು ವಹಿವಾಟಿಗಾಗಿ ಅವಶ್ಯವಿರುವ ಮೂಲಭೂತ ಸೌಲಭ್ಯಗಳನ್ನು ಮಾರುಕಟ್ಟೆ ಸಮಿತಿ ನಿಧಿಯಿಂದ ಪ್ರಾಂಗಣದಲ್ಲಿ ಒದಗಿಸಲಾಗಿದೆ. ಪ್ರಸ್ತುತ ಮಾರುಕಟ್ಟೆ ಪ್ರಾಂಗಣದಲ್ಲಿ ರೂ. 13.72 ಲಕ್ಷ ಅಂದಾಜಿನಲ್ಲಿ ಕೆಳಗಿನ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

1) ಆಡಳಿತ ಕಛೇರಿ ಕಟ್ಟಡ ದುರಸ್ತಿ 2) ಪ್ರಾಂಗಣದಲ್ಲಿ ಮುರಿದಿರುವ ಎಲ್ಲಾ ಕಬ್ಬಿಣದ ಗೇಟುಗಳನ್ನು ಸರಿಪಡಿಸುವುದು. 3) ಪ್ರಾಂಗಣದಲ್ಲಿನ ತರಕಾರಿ ಮಾರುಕಟ್ಟೆ ಮತ್ತು ದವಸ ಧಾನ್ಯ ಮಾರುಕಟ್ಟೆಯಲ್ಲಿ ಸುಲಭ ಶೌಚಾಲಯ ನಿರ್ಮಿಸುವುದು. 4) ಆಡಳಿತ ಕಛೇರಿ ಕಟ್ಟಡದ ಸಜ್ಜಾ ಮತ್ತು ಬೀಂ ಹೇಚ್ಚುವರಿ ಕಾಮಗಾರಿ. 5) ತರಕಾರಿ ಮಾರುಕಟ್ಟೆಯ ಕ್ಯಾಂಟೀನ್ ಕಟ್ಟಡದ ದುರಸ್ತಿ. 6) ಕುಡಿಯುವ ನೀರಿನ ವ್ಯವಸ್ಥೆಗಾಗಿ ತರಕಾರಿ ಮತ್ತು ದವಸ ಧಾನ್ಯ ಮಾರುಕಟ್ಟೆಯಲ್ಲಿ

ಪ್ಲಾಟ್‌ಫಾರಂ ಟ್ಯಾಂಕ್ ನಿರ್ಮಿಸುವುದು. 7) ತರಕಾರಿ ಮಾರುಕಟ್ಟೆಯಲ್ಲಿನ 12 ಅಂಗಡಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು. 8) ಮುಖ್ಯ ಪ್ರಾಂಗಣದಿಂದ ತರಕಾರಿ ಮಾರುಕಟ್ಟೆ ಪ್ರಾಂಗಣದವರೆಗೆ ಬಾಕ್ಸ್ ಮಾದರಿ ಚರಂಡಿ ನಿರ್ಮಿಸುವುದು.

ಶ್ರೀ ಚೌಡರೆಡ್ಡಿ:- ಮಾನ್ಯ ಅಧ್ಯಕ್ಷರೇ, ನಮ್ಮ ಕೃಷಿ ಮಾರುಕಟ್ಟೆ ಸಚಿವರು ಬಹಳ ಬುದ್ಧಿವಂತರು. ಆದರಲ್ಲೂ ಕೂಡ ಬಹಳ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡತಕ್ಕಂಥವರು. 1994ರಲ್ಲಿ ಅವರು ಆರೋಗ್ಯ ಮಂತ್ರಿಗಳಾಗಿದ್ದಾಗ ನಮಗೆ 150 ಹಾಸಿಗೆಗಳು ಇರುವ ಒಂದು ಆಸ್ಪತ್ರೆಯನ್ನು ಮಂಜೂರು ಮಾಡಿಕೊಟ್ಟ ಕೀರ್ತಿ ಅವರಿಗೆ ಸಲ್ಲುತ್ತದೆ. ಅದಕ್ಕೆ ನಾನು ಅವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಇದರಲ್ಲಿ ಅಧಿಕಾರಿಗಳು ಅವರಿಗೆ ಸ್ವಲ್ಪ ಮಿಸ್‌ಲೀಡ್ ಮಾಡಿದಂತೆ ಇದೆ. ಅದಕ್ಕಾಗಿ ನಾನು ತಮ್ಮ ಮುಖಾಂತರ ಅವರಲ್ಲಿ ಕೇಳಿಕೊಳ್ಳುತ್ತೇನೆ, ಈ ಕೃಷಿ ಮಾರುಕಟ್ಟೆಗೆ ಹಣ್ಣು ಮತ್ತು ತರಕಾರಿ ಹೆಚ್ಚು ಬರುತ್ತಿದೆ, ಇದು ತಮ್ಮ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ಶೀತಲೀಕರಣ ಕೇಂದ್ರಕ್ಕೆ ಮಂಜೂರಾತಿ ದೊರೆತಿದೆಯೇ? ದೊರೆತಿದ್ದರೆ ಯಾವಾಗ ಮಾಡುತ್ತೀರಿ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಉತ್ತರ ಹೇಳಿದ್ದಾರೆ. ಎರಡನೆಯದು 13 ಲಕ್ಷ ರೂಪಾಯಿ ಹಣವನ್ನು ಕೊಟ್ಟಿದ್ದೇವೆ, ಇದು ಅಭಿವೃದ್ಧಿಗೆ ಎಂದು ತಿಳಿಸಿದ್ದಾರೆ. ಆದರೆ ಇಲ್ಲಿ ಏನಾಗಿದೆ ಅಂದರೆ ಈ ಹಣ ಕೊಟ್ಟಿರುವುದು ಶೌಚಾಲಯ ಮಾಡುವುದಕ್ಕೆ ಗೇಟ್‌ಗಳನ್ನು ರಿಪೇರಿ ಮಾಡುವುದಕ್ಕೆ, ನೀರು ಸರಬರಾಜು ಮಾಡುವುದಕ್ಕೆ ಎಂದು ಹೇಳಿದ್ದಾರೆ. ಆದರೆ ಇಲ್ಲಿ ಗುರುತರವಾದ ವಿಷಯವೇನೆಂದರೆ 9-03-2001ರಲ್ಲಿ ನಾನು ಇದೇ ತರಹ ಒಂದು ಪ್ರಶ್ನೆ ಕೇಳಿದ್ದೆ, ಈ ಕೃಷಿ ಮಾರುಕಟ್ಟೆಗೆ ಹಣ್ಣು ಮತ್ತು ತರಕಾರಿ ಜಾಸ್ತಿ ಬರುತ್ತಿದೆ, ಇದರ ಅಭಿವೃದ್ಧಿಗೆ ಏನು ಮಾಡುತ್ತಿದ್ದೀರಿ ಎಂದು ನಾನು ಆಗ ಕೇಳಿದ್ದೆ, ಅದಕ್ಕೆ 128ಎಕರೆ ಗೋಮಾಳ ಜಮೀನಿನಲ್ಲಿ 10 ಎಕರೆ ಜಮೀನು ಪಡೆದುಕೊಂಡು ಅಭಿವೃದ್ಧಿ ಮಾಡುತ್ತೇವೆಂದು ಹೇಳಿದ್ದರು. ಅದನ್ನು ಇವತ್ತು ತಿಳಿಸಿಲ್ಲ. ಅಭಿವೃದ್ಧಿಗೆ ಇವತ್ತು ದುಡ್ಡು ಕೊಟ್ಟಿಲ್ಲ ಇರುವುದನ್ನು ರಿಪೇರಿ ಮಾಡುವುದಕ್ಕೆ ಇಂಪ್ರೂವ್ ಮಾಡುವುದಕ್ಕೆ ಹಣ ಕೊಟ್ಟಿದ್ದಾರೆಯೇ ಹೊರತು ಬೇರೇನೂ ಇಲ್ಲ. ಅವರೇ ಒಪ್ಪಿಕೊಂಡಿದ್ದಾರೆ, ಹಣ್ಣು ಮತ್ತು ತರಕಾರಿ ಈ ಕೃಷಿ ಮಾರುಕಟ್ಟೆಗೆ ಜಾಸ್ತಿ ಬರುತ್ತಿದೆ ಎಂದು ಈ ಬಗ್ಗೆ ಸ್ವಲ್ಪ ಡಿಟೇಲ್ ಆಗಿ ಹೇಳಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್(ಸಾಸನೂರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಅವರ ಮೊದಲನೇ ಪ್ರಶ್ನೆಗೆ "ಹೌದು" ಎಂದು ಉತ್ತರ ಹೇಳಿದ್ದೇನೆ. ಎರಡನೇ ಪ್ರಶ್ನೆಗೆ "ಇಲ್ಲ" ಎಂದು ಉತ್ತರ ಹೇಳಬೇಕಾದರೆ ಅವರು ಪ್ರಶ್ನೆ ಕೇಳಿದ್ದು ಕೇಂದ್ರ ಸರ್ಕಾರದಿಂದ ಧನಸಹಾಯ ಬಂದಿದೆಯೇ ಎಂದು ಕೇಳಿದ್ದರು, ಕೇಂದ್ರ ಸರ್ಕಾರದಿಂದ ಧನಸಹಾಯ ಬಂದಿಲ್ಲ. ಅದಕ್ಕೆ ಇಲ್ಲ ಎಂದು ಹೇಳಿದ್ದೇನೆ. 1995ನೇ ಇಸವಿಯಲ್ಲಿ ರಾಷ್ಟ್ರೀಯ ತೋಟಗಾರಿಕಾ ಮಂಡಲಿವತಿಯಿಂದ ಚಿಂತಾಮಣಿಯಲ್ಲಿ ಒಂದು ಶೀತಲಗೃಹ ಕಟ್ಟಬೇಕೆನ್ನುವ ಉದ್ದೇಶ ಇಟ್ಟುಕೊಂಡಿದ್ದರು. ಅದಕ್ಕೆ ಸುಮಾರು 49 ಲಕ್ಷ ರೂಪಾಯಿಗಳ ಒಂದು ಯೋಜನೆ ತಯಾರು ಮಾಡಿ 1997ನೇ ಇಸವಿಯಲ್ಲಿ 10 ಲಕ್ಷ ರೂಪಾಯಿಗಳನ್ನು ಸಹ ಬಿಡುಗಡೆ ಮಾಡಿದರು. ಆದರೆ ಅದನ್ನು ಒಬ್ಬ ಕಂಟ್ರಾಕ್ಟರ್‌ಗೆ ಕೊಟ್ಟಾಗ ಅವನು 22.60 ಲಕ್ಷಕ್ಕೂ ಬಿಲೋ ಟೆಂಡರ್ ಹಾಕಿದ್ದರಿಂದ ಆ ಕೆಲಸ ಅವನು ಸರಿಯಾಗಿ ಮಾಡದೇ ಅರ್ಧಕ್ಕೆ ನಿಲ್ಲಿಸಿದ್ದರಿಂದ ಆ ಹಣವನ್ನು ಪುನಃ ರಾಷ್ಟ್ರೀಯ

ತೋಟಗಾರಿಕಾ ಇಲಾಖೆಗೆ ಕೊಟ್ಟಿದ್ದಾಗಿದೆ. ಆದರೆ ಅದು ಅಷ್ಟಕ್ಕೆ ನಿಲ್ಲಬಾರದು ಎನ್ನುವ ಉದ್ದೇಶದಿಂದ ನಮ್ಮ ಇಲಾಖೆಯವರು ಚಿಂತಾಮಣಿಯಲ್ಲಿ ಈಗಾಗಲೇ 13 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಅಲ್ಲಿ ಒಂದು ಶೀತಲಗೃಹದ ಕೆಲಸ ಪ್ರಾರಂಭಿಸಿದ್ದೇವೆ. ಮೊನ್ನೆ ತಾನೇ ಸರ್ಕಾರದಿಂದ ಮತ್ತೆ 20 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಆ ಶೀತಲಗೃಹವನ್ನು ಬಹುತೇಕ ಜುಲೈ 31ರ ಒಳಗಾಗಿ ಪೂರ್ತಿ ಮಾಡಿ ಅವರ ಸಮಸ್ಯೆಯನ್ನು ನಿವಾರಣೆ ಮಾಡುತ್ತೇವೆ. ಅವರು ಹೇಳಿದ ಹಾಗೆ ನಾವು 13 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು ಈ ಶೀತಲ ಗೃಹಕ್ಕೆ ಅಲ್ಲ. ಅವರು ಮೂರನೇ ಪ್ರಶ್ನೆ ಕೇಳಿದ್ದಾರೆ, ಏನೇನು ಅಭಿವೃದ್ಧಿ ಕೆಲಸ ಕೈಗೊಂಡಿದ್ದೀರಿ ಎಂದು ಅದಕ್ಕೆ ಅನುಬಂಧ-1 ರಲ್ಲಿ ನಾವು ಏನು ಕೆಲಸ ಮಾಡುತ್ತಿದ್ದೇವೆ ಎನ್ನುವುದನ್ನು ಹೇಳಿದ್ದೇವೆ. ಅನುಬಂಧ-2 ರಲ್ಲಿ ಮುಂದೆ ಏನು ಕೆಲಸ ಮಾಡಬೇಕು ಎನ್ನುವ ಬಗ್ಗೆ ಹೇಳಿದ್ದೇವೆ. ಅದು ಶೀತಲ ಗೃಹಕ್ಕೆ ಸಂಬಂಧಪಟ್ಟ ಕೆಲಸ ಅಲ್ಲ. ಮಾನ್ಯ ಸದಸ್ಯರು ಕೇಳಿದ ರೀತಿಯಲ್ಲಿ ಆ ಶೀತಲ ಗೃಹವನ್ನು ಜುಲೈ 31ರೊಳಗಾಗಿ ಪೂರ್ತಿ ಮಾಡಿಕೊಡುತ್ತೇವೆ ಎನ್ನುವ ಭರವಸೆ ಕೊಡುತ್ತೇನೆ.

ಶ್ರೀ ಚೌಡರೆಡ್ಡಿ:- ಮಾನ್ಯ ಅಧ್ಯಕ್ಷರೇ, ಅಲ್ಲಿ ಎರಡು ಎಕರೆ ಪ್ರದೇಶದಲ್ಲಿ ಕಳೆದ 6-7 ವರ್ಷಗಳ ಹಿಂದೆ ಹಣ್ಣು ತರಕಾರಿ ಅಂಗಡಿಗಳ ಮಾರ್ಕೆಟ್‌ನ್ನು ನಿರ್ಮಾಣ ಮಾಡಿದ್ದೇವೆ. ಈಗ ಹಣ್ಣು ತರಕಾರಿ ಬಹಳ ಜಾಸ್ತಿ ಬರುತ್ತಾ ಇದೆ. ಅದನ್ನು, ಅವರು ಒಪ್ಪಿಕೊಂಡಿದ್ದಾರೆ. ಹೋದವರ್ಷ ಅದರ ಬಗ್ಗೆ ನಮಗೆ ಉತ್ತರ ಕೊಟ್ಟಿದ್ದಾರೆ. 128 ಎಕರೆ ಗೋಮಾಳದ ಜಮೀನಿನಲ್ಲಿ 10 ಎಕರೆ ತೆಗೆದುಕೊಂಡು ಅದನ್ನು ಅಭಿವೃದ್ಧಿ ಮಾಡುತ್ತೇವೆ, ಜಾನುವಾರುಗಳನ್ನು ಬೇರೆ ಕಡೆ ಸಾಗಿಸುತ್ತೇವೆ ಎಂದು ಹೇಳಿದ್ದಾರೆ. ಅದರ ಬಗ್ಗೆ ತಾವು ದಯವಿಟ್ಟು ಕ್ರಮ ತೆಗೆದುಕೊಳ್ಳಬೇಕು. ಅವರು ಮನಸ್ಸು ಮಾಡಿದರೆ ಆಗುತ್ತದೆ. ಆದರೆ, ಅಧಿಕಾರಿಗಳು ಮಿಸ್‌ಲೀಡ್ ಮಾಡುತ್ತಾರೆ. ಇದರ ಬಗ್ಗೆ ಅವರು ಸರಿಯಾಗಿ ನೋಡಬೇಕೆಂದು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) :- ಸನ್ಮಾನ್ಯ ಅಧ್ಯಕ್ಷರೇ, ಆ ತರಹ ಮಿಸ್‌ಲೀಡ್ ಮಾಡುವಂಥಾದ್ದೇನೂ ಇದರಲ್ಲಿ ಇಲ್ಲ. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ, ಆ ಎರಡು ಎಕರೆಯಲ್ಲಿರುವ ಜಾನುವಾರ ಮಾರ್ಕೆಟ್‌ಗಳನ್ನು ಬೇರೆ ಕಡೆ ವರ್ಗಾಯಿಸಬೇಕೆಂದು ತಿಳಿದುಕೊಂಡು, 10 ಎಕರೆ ಗೋಮಾಳದಲ್ಲಿ ನಾವು ಅದನ್ನು ತೆಗೆದುಕೊಳ್ಳಬೇಕೆಂದು ಪತ್ರವ್ಯವಹಾರ ಮಾಡಿ, ರೆವಿನ್ಯೂ ಇಲಾಖೆಗೆ ಬರೆದರೆ ದುರ್ದೈವವಶಾತ್ ಗೋಮಾಳ ಎಂದರೆ ಗೊತ್ತಿದೆ, ಸರ್ಕಾರದವರು ಯಾರಿಗೂ ಕೊಡುವುದಿಲ್ಲ. ಆದರೆ, 10 ಎಕರೆ ಜಮೀನು ಅಲ್ಲಿ ಕೊಡಬೇಕೆಂದು ನಾವು ಕೇಳಿದಾಗ, ಆ ತಹಶೀಲ್ದಾರ್‌ರವರಿಂದ ನಮಗೆ ಅಲ್ಲಿ ಕೊಡಲಿಕ್ಕೆ ಸ್ಥಳವೇ ಇಲ್ಲವೆಂಬ ವರದಿ ಬಂದಿದೆ. ಹೀಗಾಗಿ ನಾವು ಬೇರೆ ಸ್ಥಳವನ್ನು ಹುಡುಕಾಡಿಕೊಂಡು ಈ ಜಾನುವಾರು ಮಾರುಕಟ್ಟೆಯನ್ನು ಅಲ್ಲಿಗೆ ಸ್ಥಳಾಂತರ ಮಾಡಿ, ಆ ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸುವುದಕ್ಕೆ ಏನು ಮಾಡಬೇಕೆಂಬುದಕ್ಕೆ ನಾವು ಕ್ರಮ ಜರುಗಿಸುತ್ತೇವೆ.

ರಾಜ್ಯದಲ್ಲಿ ತೆಂಗಿನ ಮರಗಳಿಗೆ ತಗಲಿರುವ ನುಸಿ ರೋಗ

141 (1905) - ಶ್ರೀ ಪಿ.ಜಿ.ಆರ್ ಸಿಂಧ್ಯಾ (ಕನಕಪುರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?